ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 6, May-June, 2024, Pp. 10-19
©*IIMRD*, Mysuru

IIMRD JOURNALS
www.iimrd.com

# ಹಿಂದುಳಿದ ಸಮುದಾಯಗಳ ಸಾಮಾಜಿಕ ಸುಧಾರಣೆಯಲ್ಲಿ ಮಹಾತ್ಮ ಜ್ಯೋತಿಬಾ ಫುಲೆ, ಶ್ರೀ ನಾರಾಯಣ ಗುರು ಮತ್ತು ರಾಮಮನೋಹರ ಲೋಹಿಯಾ ಅವರ ಪಾತ್ರ

**ಮಹದೇವಸ್ವಾಮಿ ಎಸ್**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

**ಸಾರಾಂಶ: (Abstract)**

*ಭಾರತವು ಒಂದು ವಿಶಾಲ ದೇಶ. ಅದರಲ್ಲಿ ಅನೇಕ ದೊಡ್ಡ ದೊಡ್ಡ ಬೆಟ್ಟಗಳು, ದಟ್ಟ ಅರಣ್ಯಗಳು, ನದಿಗಳು ತುಂಬಿ ಸಂಪದ್ಭರಿತ ದೇಶವಾಗಿದೆ. ಅನೇಕ ಬಗೆಯ ಹವಾಗುಣಗಳಿಂದ ಕೂಡಿದ ಭಾರತದ ಭೂಮಿಯು ಫಲವತ್ತಾಗಿದೆ ಮತ್ತು ಅನೇಕ ಖನಿಜಗಳ ತವರು ಮನೆಯಾಗಿದೆ. ದುಡಿಯಲು ಜನಸಂಖ್ಯೆ ಹೆಚ್ಚಾಗಿದೆ. ಇದನ್ನು ನೋಡಿದರೆ ಇಡೀ ಈ ಭೂಮಂಡಲದ ಮೇಲೆಯೇ ಭಾರತೀಯರು ಶ್ರೀಮಂತರೂ ಸುಖಿಗಳೂ ಆಗಿರಬೇಕಿತ್ತು. ಆದರೆ ಭಾರತದ ಶ್ರೀಮಂತವಾಗಿರದೆ ಬಡತನದಿಂದ ಕೂಡಿರುವ ಅಭಿವೃದ್ಧಿಶೀಲ ರಾಷ್ಟ್ರವಾಗಿದೆ. ದೇಶವಾಗಿದೆ ಎಂಬ ಅಪವಾದಕ್ಕೀಡಾಗಿದೆ. ಇದಕ್ಕೆ ಮುಖ್ಯ ಕಾರಣ ಭಾರತದಲ್ಲಿ ಬಹು ಕಾಲದಿಂದ ಬೆಳೆದುಬಂದ ಜಾತಿಪದ್ಧತಿ ಮೂಲ ಕಾರಣವಾಗಿದೆ.[1] ಈ ಲೇಖನದಲ್ಲಿ ಹಿಂದುಳಿದವರ ಅಭಿವೃದ್ಧಿಗಾಗಿ ಶ್ರಮಿಸಿದ ಮಹನೀಯರ ಬಗ್ಗೆ ಬೆಳಕು ಚೆಲ್ಲಲಾಗಿದೆ.*

**ಮುಖ್ಯಪದಗಳು (Keywords):** ಹಿಂದುಳಿದ ಸಮುದಾಯಗಳು, ಜಾತಿ ಪದ್ಧತಿ, ಮಹಾತ್ಮ ಜ್ಯೋತಿಬಾ ಫುಲೆ, ಶ್ರೀ ನಾರಾಯಣ ಗುರು, ರಾಮಮನೋಹರ ಲೋಹಿಯಾ.

## ಪೀಠಿಕೆ

ಜಗತ್ತಿನ ಎಲ್ಲಾ ಪ್ರಾಚೀನ ನಾಗರಿಕತೆಗಳಲ್ಲೂ ಆರ್ಥಿಕ ಕಾರಣಗಳಿಂದಾಗಿ ಕೃತಿಮ ವರ್ಗಗಳನ್ನು ಒಳಗೊಂಡ ಸಾಮಾಜಿಕ ವ್ಯವಸ್ಥೆ ಕಾಣಿಸಿಕೊಂಡಿದೆ.[2] ಅದು ಧರ್ಮದ ನೆರಳಲ್ಲಿ ತಲೆಎತ್ತಿ, ಧರ್ಮಗುರುಗಳ ತಂತ್ರ–ಕುತಂತ್ರಗಳ ಅಂಗವಾಗಿ ಬೆಳೆದು ನಿಂತಿದೆ. ಪ್ರಾಚೀನ ನಾಗರಿಕತೆಗಳಲ್ಲೆಲ್ಲ ಪುರೋಹಿತಶಾಹಿಯ ಪ್ರಾಬಲ್ಯವೇ ಕಾಣುತ್ತದೆ. ಸಮಾಜದಲ್ಲಿ ಕೆಲವು ಛದ್ಮವೇಷಿ ಚಿಂತಕರಿದ್ದು, ಕ್ಷಾತ್ರಬಲವುಳ್ಳವರು ಲೂಟಿ ಮಾಡಿ ತಂದ ಸಂಪತ್ತಿನ ಮೇಲೆ ಇವರು ಹತೋಟಿ ಹೊಂದುತ್ತಿದ್ದರು. ಪುರೋಹಿತಶಾಹಿಯ ವ್ಯಭಿಚಾರವನ್ನು ಕೂಡ ಜನ ಸಾಮಾನ್ಯರು ಪ್ರಶ್ನಿಸುವಷ್ಟು ಧೈರ್ಯ ತೋರಲಿಲ್ಲ. ಯಾಕೆಂದರೆ ಪುರೋಹಿತಶಾಹಿಯ ಆಕ್ರೋಶವೆಂದರೆ ಜನಸಾಮಾನ್ಯರಿಗೆ ನರಕಕ್ಕಿಂತಲೂ ಭಯಂಕರವಾಗಿರುತ್ತಿತ್ತು.[3]

*Please cite this article as:* *ಮಹದೇವಸ್ವಾಮಿ ಎಸ್.* (2024). ಹಿಂದುಳಿದ ಸಮುದಾಯಗಳ ಸಾಮಾಜಿಕ ಸುಧಾರಣೆಯಲ್ಲಿ ಮಹಾತ್ಮ ಜ್ಯೋತಿಬಾ ಫುಲೆ, ಶ್ರೀ ನಾರಾಯಣ ಗುರು ಮತ್ತು ರಾಮಮನೋಹರ ಲೋಹಿಯಾ ಅವರ ಪಾತ್ರ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(6). ಪು.ಸಂ.* 10–19

ಆರ್ಯರು ಭಾರತಕ್ಕೆ ಬರುವ ಪೂರ್ವದಲ್ಲೇ ದ್ರಾವಿಡರು ವೃಕ್ಷಪೂಜೆ ಮತ್ತು ನಾಗಪೂಜೆ ಸಂಪ್ರದಾಯಗಳಲ್ಲಿ ಪುರೋಹಿತಶಾಹಿಯ ಸ್ತಂಭಗಳನ್ನು ನೆಡಲಾಗಿತ್ತು. ಮೊಹಂಜೋದಾರೊ ಮತ್ತು ಹರಪ್ಪಾಗಳಲ್ಲಿ ಸಿಂಧೂ ತೀರದ ನಾಗರಿಕತೆಯಲ್ಲಿ ಬಹಳ ಹಿಂದೆಯೇ ಪುರೋಹಿತಶಾಹಿ ವಿಕಾಸಗೊಂಡಿತ್ತು ಎಂಬುವುದಕ್ಕೆ ಸಾಕಷ್ಟು ಪುರಾವೆಗಳು ದೊರೆತಿವೆ.[4]

ಪುರೋಹಿತಶಾಹಿಯನ್ನು ಸಜ್ಜುಗೊಳಿಸಿ ಜೀವಂತವಾಗಿರಿಸಿದ್ದು ಋಗ್ವೇದದ ಆರ್ಯಪರಂಪರೆ.[5] ಬ್ರಾಹ್ಮಣ ಹಾಗೂ ಕ್ಷತ್ರಿಯ ವರ್ಣಗಳು ನಿಗದಿಯಾಗಿದ್ದವು,ಅಂದ ಮೇಲೆ ಉಳಿದ ವರ್ಣಗಳನ್ನೂ ಅಲ್ಲಿ ಗುರುತಿಸಲಾಗಿತ್ತೆಂಬುದು ಸಿದ್ದವಾಗುತ್ತದೆ ನಂತರ ಇತರ ವರ್ಣಗಳಾದ ವೈಶ್ಯ ಮತ್ತು ಶೂದ್ರ ಬೆಳವಣಿಗೆ ಹೊಂದಿದವು.[6]

ಈ ಸಮಸ್ಯೆಯನ್ನು ಬಗೆಹರಿಸಲು ಗೌತಮ ಬುದ್ದ ಹಾಗೂ ಭಗವಾನ್ ಮಹಾವೀರ್ 2500 ವರ್ಷಗಳ ಹಿಂದಯೇ ಪ್ರಯತ್ನಿಸಿದರು. ನಂತರದಲ್ಲಿ ಬಸವಣ್ಣ, ಕನಕದಾಸರು, ಪುರಂದರದಾಸರು, ತುಕರಾಮರು, ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಂ ಹೀಗೆ ಹಲವಾರು ಮಹನೀಯರು ಸಾಕಷ್ಟು ಪ್ರಯತ್ನಪಟ್ಟು ಜಾತಿ ವ್ಯವಸ್ಥೆ ಹೋಗಲಾಡಿಸಲು ಶ್ರಮಿಸಿದರು.[7] ಆದರೂ ಜಾತಿ ವ್ಯವಸ್ಥೆ ಇಂದಿಗೂ ಜೀವಂತವಾಗಿದೆ.

ಭಾರತವನ್ನಾಳಿದ ಬ್ರಿಟಿಷರು ದೇಶದ ಸಂಪತ್ತನ್ನು ದೋಚಿದರು. ಇದರ ವಿರುದ್ಧ ಎಲ್ಲಾ ಜಾತಿ, ಧರ್ಮ ಮತ್ತು ವರ್ಗಗಳ ಜನ ಸಂಘಟಿತರಾಗಿ ಹೋರಾಟ ಮಾಡಿದರು. ದೇಶದ ಸಮಗ್ರ ಜನತೆ ಪ್ರಪ್ರಥಮ ಭಾರಿಗೆ ಜಾತಿ ಮತ್ತು ಧರ್ಮಗಳನ್ನು ಮೀರಿ ಒಂದಾದದ್ದು ಈ ಕಾರಣಕ್ಕಾಗಿ ಮಾತ್ರ. ಅದಕ್ಕೂ ಹಿಂದೆ ಈ ದೇಶದಲ್ಲಿ ಸಾಕಷ್ಟು ಜಾತ್ಯತೀತ ಆಂದೋಲನಗಳಾಗಿವೆ.[8] ಅವುಗಳಲ್ಲಿ ಹಿಂದುಳಿದ ವರ್ಗಗಳ ಆಂದೋಲನವು ಒಂದು. ಹಿಂದುಳಿದ ವರ್ಗಗಳ ಆಂದೋಲನ ಕುರಿತು ಚಾರಿತ್ರಿಕ ನೆಲೆಯಲ್ಲಿ ವಿವೇಚಿಸುವುದು ಅನಿವಾರ್ಯ, ಆದ್ದರಿಂದ ಹಿಂದುಳಿದ ವರ್ಗಗಳ ಹೋರಾಟ ಮತ್ತು ಬೆಳವಣಿಗೆಗೆ ಶ್ರಮಿಸಿದ ಮಹನೀಯರ ಬಗ್ಗೆ ತಿಳಿದುಕೊಳ್ಳುವುದು ಬಹಳ ಮುಖ್ಯವಾಗಿದೆ.[9]

**ಮಹಾತ್ಮ ಜ್ಯೋತಿರಾವ್ ಬಾ ಪುಲೆ**

ಮಹಾತ್ಮ ಜ್ಯೋತಿರಾವ್ ಬಾ ಪುಲೆ ಶ್ರೇಷ್ಠ ಸಮಾಜ ಸುಧಾರಕ ಮತ್ತು ಸಮ ಸಮಾಜದ ಚಿಂತಕರಾಗಿದ್ದರು. 19ನೇ ಶತಮಾನದಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆಯ ಗಾಳಿ ಬೀಸಲು ಕಾರಣರಾದರು. ಶೂದ್ರರಿಗೆ ನಾಯಕರಾದ ಅವರು ರಾಜ–ಮಹಾರಾಜರು, ಜಮೀನ್ದಾರರು, ಪುರೊಹಿತರು ಮತ್ತು ವ್ಯಾಪಾರ ವರ್ಗಗಳು ನಡೆಸುತ್ತಿದ್ದ ಶೋಷಣೆಯನ್ನು ಧಿಕ್ಕರಿಸಿ ಜನಾಂದೋಲನ ಹುಟ್ಟು ಹಾಕಿದರು.[10]

ಧರ್ಮದ ಆಧಾರವಿರುವ ಗುಲಾಮಗಿರಿ, ಸಾಮಾಜಿಕ ಅನ್ಯಾಯ, ಆರ್ಥಿಕ ಶೋಷಣೆಯ ವಿರುದ್ಧ ಜನಜಾಗೃತಿ ಮೂಡಿಸಿದ ಜ್ಯೋತಿರಾವ್ ಬಾಲ್ಯವಿವಾಹ, ಬಹುಪತ್ನಿತ್ವ, ಕೇಶಮುಂಡನ, ಜಾತೀಯತೆ ಅಸ್ಪೃಶ್ಯತೆ ಮೊದಲಾದ ಸಾಮಾಜಿಕ ಪಾಪಗಳ ವಿರುದ್ಧ ಅಜೀವಪರ್ಯಂತ ಆಂದೋಲನ ನಡೆಸಿದರು. ಶೂದ್ರ, ಅತಿಶೂದ್ರರಲ್ಲಿ ಹಾಗೂ ಮಹಿಳೆಯರಲ್ಲಿ ಶಿಕ್ಷಣ ಪ್ರಸಾರ ಮಾಡಲು ಮುಂದಾದರು. ಅದಕ್ಕೆ ತಮ್ಮ

ತಂದೆಯಿಂದ ವಿರೋಧ ಬಂದಾಗ ಪತ್ನಿ ಜತೆಗೆ ಮನೆಯನ್ನೆ ತೊರೆದು ಸಮಾಜ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು.[11]

ಜ್ಯೋತಿರಾವ್ ಹುಟ್ಟಿದ್ದು 1827 ರಲ್ಲಿ ಹಿಂದುಳಿದ 'ಮಾಳಿ' ಜಾತಿಯ ಸಾಮಾನ್ಯ ಕುಟುಂಬದಲ್ಲಿ. ಅವರು ಶಾಲೆ ಸೇರಿದಾಗ ಅವರಿಗೆ 7 ವರ್ಷ, ನಾಲ್ಕು ವರ್ಷ ಮರಾಠಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ನಂತರ ಸ್ಕಾಟಿಷ್ ಮಿಷನ್ನಿನ ಇಂಗ್ಲಿಷ್ ಶಾಲೆ ಸೇರಿದರು. ಜ್ಯೋತಿರಾವ್ ಅರ್ಧಕ್ಕೆ ವಿದ್ಯಾಭ್ಯಾಸ ನಿಲ್ಲಿಸಿದಾಗ, ಶಾಲೆಯ ಅಧ್ಯಾಪಕರಾದ ಗೆಫಾರ್‌ಬೇಗ್ ಮುನ್ಷಿ ಮತ್ತು ಅಜೆಟ್ ಸಾಹೇಲಿಯ ಅವರ ತಂದೆಯನ್ನು ಕರೆಯಿಸಿಕೊಂಡು ಶಾಲೆ ಬಿಡಿಸದಿರಲು ಮನವೊಲಿಸಿದರು. ಇವರ ಉತ್ತೇಜನದಿಂದ ಪುನಃ ಶಾಲೆಯನ್ನು ಸೇರಿದರು. ಅನಂತರ 1841 ರಲ್ಲಿ ಸ್ಕಾಟಿಷ್ ಮಿಷನ್ನಿನ ಶಾಲೆಯಲ್ಲಿ ಅಭ್ಯಾಸ ಮಾಡಿ ಇಂಗ್ಲಿಷ್ ಶಿಕ್ಷಣವನ್ನು ಕಲಿತರು. ಇಂತಹ ಶಿಕ್ಷಣದಿಂದ ಧರ್ಮಕ್ಕೆ ಹಾನಿಯಾಗುತ್ತದೆ. ಅದರಲ್ಲೂ ಕೆಳಜಾತಿಯವನೊಬ್ಬ ಕಲಿಯುವುದು ಮಹಾಪಾಪ ಎನ್ನುತ್ತಿದ್ದ ಕಾಲವಾಗಿತ್ತು. ಛತ್ರಪತಿ ಶಿವಾಜಿ ಮತ್ತು ಜಾರ್ಜ್ ವಾಷಿಂಗ್ಟನ್ ಬಗ್ಗೆ ಓದಿದ ಜ್ಯೋತಿ ಬಾ ಅವರ ಪ್ರಭಾವಕ್ಕೆ ಒಳಗಾದರು. ವಿದೇಶಿಯರ ದುರಾಕ್ರಮಣವನ್ನು ಪ್ರತಿಭಟಿಸುವ ನಿರ್ಧಾರ ಕೈಗೊಂಡರು. ಧಾರ್ಮಿಕ ಮತ್ತು ರಾಜಕೀಯ ದಾಸ್ಯಗಳೆರಡನ್ನೂ ವಿರೋಧಿಸುತ್ತಿದ್ದ ಜ್ಯೋತಿಬಾ ತಮ್ಮ ಸಂಗಡಿಗರೊಂದಿಗೆ ಇಂಗ್ಲಿಷರ ವಿರುದ್ಧ ದಂಗೆಯೆದ್ದರು. ಪ್ರಬಲ ಸೈನ್ಯದ ವಿರುದ್ಧ ವೈಯಕ್ತಿಕವಾಗಿ ದಂಗೆ ಏಳುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ತಿಳಿದು ಅಂತಹ ಪ್ರಯತ್ನವನ್ನು ಕೈಬಿಟ್ಟರು.[12]

ಕುರಾನ್‌ನ ಶಿಸ್ತು, ಬೈಬಲ್‌ನ ಮಾನವೀಯತೆಗಳು ಅವರ ಮೇಲೆ ಪರಿಣಾಮ ಬೀರಿದವು. ಬಂಡಾಯಗಾರ ಲೇಖಕ ಥಾಮಸ್ ಸೇನ್ ಅವರ 'ರೈಟ್ ಆಫ್ ಮ್ಯಾನ್' ಪುಸ್ತಕ ಅವರ ಮೇಲೆ ವಿಶೇಷ ಪ್ರಭಾವ ಬೀರಿತು. ತಮ್ಮ 21ನೇ ವಯಸ್ಸಿಗೆ ಶಿಕ್ಷಣ ಪೂರ್ಣಗೊಳಿಸಿದ ಜ್ಯೋತಿರಾವ್ ಇಡೀ ಬದುಕನ್ನು ಸಮಾಜ ಸೇವೆಗೆ ಮುಡಿಪಾಗಿಡಲು ನಿರ್ಧರಿಸಿದರು. ಆ ಹೊತ್ತಿಗೆ 'ಪರಮಹಂಸ ಸಭಾ'ದತ್ತ ಆಕರ್ಷಿತರಾಗಿದ್ದ ಅವರು ನಂತರ ಅಲ್ಲಿನ ಕಾರ್ಯ ಚಟುವಟಿಕೆಗಳ ಬಗ್ಗೆ ಭಿನ್ನಾಭಿಪ್ರಾಯ ತಾಳಿ, ತಾವು ನಂಬಿದ ಮೌಲ್ಯಗಳ ಸಸಿ ನೆಡಲು ಮಹಾರಾಷ್ಟ್ರಾದ್ಯಂತಹ ನಿರಂತರ ಪ್ರವಾಸ ನಡೆಸಿ ಜನಜಾಗೃತಿ ಮೂಡಿಸಿದರು. ಶಿಕ್ಷಣವು ಸರ್ವಾಂಗೀಣ ಅಭಿವೃದ್ಧಿಯ ಹೆಬ್ಬಾಗಿಲು ಎಂದು ಹೇಳಿದ ಅವರು ಶೂದ್ರರು, ಅತಿಶೂದ್ರರು ಮಹಿಳೆಯರು ಮುಂತಾದ ಶೋಷಿತ ಸಮುದಾಯಗಳಿಗಾಗಿ ಶಾಲೆಗಳನ್ನು ಆರಂಭಿಸಿದರು.[13]

ಜ್ಯೋತಿಬಾ 1885ರಲ್ಲಿ ಪುಣೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಬಂದ ಆಹ್ವಾನವನ್ನು ತಿರಸ್ಕರಿಸಿ 'ಮಾನವನ ಮೂಲಭೂತ ಹಕ್ಕುಗಳ ರಕ್ಷಣೆಗೆ ಮುಂದಾಗದ ಸಾಹಿತ್ಯ ಬಹುಜನ ಹಿತ ವಿರೋಧಿ, ಅಂತಹ ಯಾವ ಸಂಸ್ಥೆ, ಚಟುವಟಿಕೆಗಳ ಸಂಪರ್ಕವನ್ನು ನಾನು ಬಯಸಲಾರೆ' ಎಂದು ಅಧ್ಯಕ್ಷರಾದ ನ್ಯಾಯಮೂರ್ತಿ ರಾನಡೆ ಅವರಿಗೆ ಉತ್ತರಿಸಿದರು. ತಮ್ಮ ನಾಟಕ 'ತೃತೀಯ ರತ್ನ'ದಲ್ಲಿ ಪುರೋಹಿಶಾಹಿ ಅಮಾಯಕ ಸಮುದಾಯವನ್ನು ವಂಚಿಸಿ ತನ್ನ ಬೇಳೆ ಬೇಯಿಸಿಕೊಳ್ಳುವ ವರಸೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. 'ಬ್ರಾಹ್ಮಣರ ಕರಾಮತ್ತು' ಎಂಬ ಇನ್ನೊಂದು ಪುಸ್ತಕದಲ್ಲಿ ಶೂದ್ರ–ಅತಿಶೂದ್ರರ ದುರಂತ ಬದುಕನ್ನು ಸೆರೆಹಿಡಿದಿದ್ದಾರೆ. 1873 ರಲ್ಲಿ ಪ್ರಕಟಿಸಿದ 'ಗುಲಾಮಗಿರಿ' ಜ್ಯೋತಿಬಾ ಅವರ ಸುಪ್ರಸಿದ್ಧ ಪುಸ್ತಕ, ಇದರಲ್ಲಿ ಭಾರತದ ಬಹುಜನ ಸಮುದಾಯವನ್ನು ಬಿಗಿದಿರುವ ಧಾರ್ಮಿಕ, ಆರ್ಥಿಕ, ಸಾಮಾಜಿಕ,

ರಾಜಕೀಯ ಗುಲಾಮಗಿರಿಯನ್ನು ಸಂಪೂರ್ಣವಾಗಿ ಬಿಚ್ಚಿಟ್ಟಿದ್ದಾರೆ. 1883 ರಲ್ಲಿ ಬರೆದ 'ರೈತರ ಬಂಡಾಯ' ಪುಸ್ತಕ ಅವರು ನಿಧನರಾದ 77 ವರ್ಷಗಳ ನಂತರ ಪ್ರಕಟವಾಯಿತು. ಇದರಲ್ಲಿ ತೆರೆದಿಟ್ಟಿರುವ ರೈತರ ದಾರುಣ ಬದುಕಿನ ನಗ್ನಚಿತ್ರಣ ಎದೆಗೆ ಇರಿಯುವಂತಿದೆ. ಜ್ಯೋತಿರಾವ್ ಅವರ ಇನ್ನೆರಡು ಪ್ರಮುಖ ಪುಸ್ತಕಗಳು 'ಇಶಾರಾ' ಮತ್ತು 'ಸಾಮಾಜಿಕ ಸತ್ಯ ಧರ್ಮಪುಸ್ತಕ'.[14]

1863 ರಲ್ಲಿ ವಿಧವೆಯರು ಹೆತ್ತ ಮಕ್ಕಳನ್ನು ಪೋಷಿಸಲು ಅನಾಥಾಲಯಗಳನ್ನು ಪ್ರಾರಂಭಿಸಿದರು. ಅಲ್ಲದೆ ವಿಧವೆಯರು ಮರೆಮಾಚಿ ಬಸಿರಾದಾಗ ಅವರಿಗಾಗಿ ಒಂದು ಹೆರಿಗೆ ತಾಣವನ್ನು ತೆರೆದರು, ಬ್ರಾಹ್ಮಣ ವಿಧವೆಯರ ಕೇಶ ಮುಂಡನ ಪದ್ಧತಿಯನ್ನು ತಡೆಗಟ್ಟಿದರು. ಇದೇ ಸಂದರ್ಭದಲ್ಲಿ ಸತಿ ಪದ್ಧತಿಯ ನಿಲುಗಡೆಗೂ, ವಿಧವೆಯರ ಪುನರ್ವಿವಾಹಕ್ಕೂ ಹೋರಾಡಿದರು. 1876 ರಿಂದ 1882 ರವರೆಗೆ ಪುಣೆಯ ನಗರ ಸಭಾ ಸದಸ್ಯರಾಗಿದ್ದ ಕಾಲದಲ್ಲಿ ಅವರು ನಡೆಸಿದ ಸಾಹಸವೆಂದರೆ ಹೆಂಡದಂಗಡಿಗಳ ಹೆಚ್ಚಳ ತಡೆಗಟ್ಟಿದುದು. ಅವರು ನಡೆಸಿದ ಯಾವ ಚಳವಳಿಯೇ ಆಗಲಿ ಅದರಲ್ಲಿ ಅವರು ಕಾಣುತ್ತಿದ್ದುದು ಸಾಮಾಜಿಕ ನಿಲುವನ್ನು. ಶಿಕ್ಷಣ, ಸಾಹಿತ್ಯ, ವ್ಯವಸಾಯ ಎಲ್ಲವೂ ಸಮಾಜದ ಒಳಿತಿಗೇ ಎಂದು ಅವರು ನಂಬಿದ್ದರು. 1888 ಮೇ 11 ರಂದು ಬಾಂಬೆಯ ಮಾಂಡ್ವಿ ಕೋಳಿವಾಡದಲ್ಲಿ ಜ್ಯೋತಿ ಬಾ ಅವರಿಗೆ ಅಭಿನಂದನ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ಅವರಿಗೆ 60 ವರ್ಷ ತುಂಬಿತ್ತು, ಸನ್ಮಾನಕ್ಕೆ ಉತ್ತರಿಸಿದ ಅವರು 'ದೈವಕೃಪೆಯಿದ ನಾನು ಅಲ್ಪ ಸೇವಾಕಾರ್ಯ ಮಾಡಿದ್ದೇನೆ. ಸಾವಿರಾರು ವರ್ಷಗಳಿಂದ ತುಳಿತಕ್ಕೆ ಸಿಕ್ಕಿ ಬಿದ್ದವರಿಗೆ ಮನುಷ್ಯನ ಅಧಿಕಾರ ದೊರೆಯುವಂತೆ ಮಾಡುವುದೆ ನಿಜವಾದ ಧರ್ಮ, ನನ್ನ ಪಾಲಿನ ಕೆಲಸ ನಾನು ಮಾಡಿರುವೆ. ಇವೇನು ಹೇಳಿಕೊಳ್ಳುವಂತಹ ಕೆಲಸವೆಂದು ನಾನು ಭಾವಿಸಿಲ್ಲ' ಎಂದು ತಿಳಿಸಿದರು.[15]

ಜೀವನಪರ್ಯಂತ ಸಮಾಜಕ್ಕಾಗಿ ತಮ್ಮ ಬದುಕನ್ನು ಮೀಸಲಾಗಿಟ್ಟ ಜ್ಯೋತಿ ಬಾ 27 ನವೆಂಬರ್ 1890 ರಂದು ಪಾರ್ಶ್ವವಾಯು ಪೀಡಿತರಾಗಿ ನಿಧನರಾದರು. ನಮ್ಮ ದೇಶದ ಅನೇಕ ಪ್ರಗತಿಪರ, ಸಾಮಾಜಿಕ ಚಳುವಳಿಗಳಿಗೆ ಪ್ರವರ್ತಕರಾದ ಪುಲೆ ಕಾಲವಾಗಿ 133 ವರ್ಷಗಳಾಗಿವೆ. ನಮ್ಮ ಮನಸ್ಸುಗಳು ಮಾತ್ರ ಅವರ ಕಾಲದಲ್ಲೇ ಇನ್ನೂ ಬದುಕಿವೆ.[16]

**ಬದಲಾವಣೆಯ ಹರಿಕಾರ ಶ್ರೀ ನಾರಾಯಣ ಗುರು**

ಕೇರಳ ರಾಜ್ಯದ ಶೋಷಿತರು ಹಾಗೂ ಹಿಂದುಳಿದ ಸಮುದಾಯಗಳ ಸುಧಾರಣೆಯಲ್ಲಿ ಶ್ರೀ ನಾರಾಯಣ ಗುರು ಅವರ ಪಾತ್ರ ಮಹತ್ತರವಾದದ್ದು. ಅವರು ಸಂತರಾಗಿ, ಸಮಾಜ ಸುಧಾರಕರಾಗಿ, ಬದಲಾವಣೆಯ ಹರಿಕಾರರಾಗಿ ತಮ್ಮ ಜೀವನದುದ್ದಕ್ಕೂ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿಯೇ ಶ್ರಮಿಸಿದರು. ಈ ನಿಟ್ಟಿನಲ್ಲಿ ಅವರು ತಂದ ಸಮಾಜ ಸುಧಾರಣಾ ಕೆಲಸಗಳು ಕೇರಳ ಮಾತ್ರವಲ್ಲದೇ ಇಡೀ ಭಾರತದ ಸಾಮಾಜಿಕ ಸುಧಾರಣೆಗೆ ದಾರಿದೀಪವಾಗಿದೆ.[17]

ಪ್ರಾಚೀನ ಕೇರಳದಲ್ಲಿ ಜಾತಿಪದ್ಧತಿಯು ತುಂಬ ಕ್ರೂರವಾಗಿತ್ತು. ಅಲ್ಲಿನ ನಂಬೂದರಿ ಬ್ರಾಹ್ಮಣರು, ಇವರಿಗಿಂತ ಕೆಳಸ್ಥರದಲ್ಲಿದ್ದ ವೈಶ್ಯ, ಕ್ಷತ್ರಿಯ, ಶೂದ್ರ ಇವರೆಲ್ಲರನ್ನೂ ಒಂದೇ ಎಂದು ಪರಿಗಣಿಸಿದ್ದರು. ಹಾಗಾಗಿ ಅಲ್ಲಿನ ಪ್ರಮುಖ ಜನಾಂಗವಾದ 'ನಾಯರ್' ಸಮುದಾಯ ಕೂಡ ಕೊಚ್ಚಿ ಹೋಗಿತ್ತು. ಬಹು

ಸಂಖ್ಯಾತರಾಗಿದ್ದ ಈಳವರು ಸಹ ಒಂದರ್ಥದಲ್ಲಿ ಅಸ್ಪೃಶ್ಯರಂತೆಯೇ ಬದುಕುತ್ತಿದ್ದರು. ಇನ್ನು ಅಲ್ಲಿನ ದಲಿತರನ್ನಂತೂ ಮನುಷ್ಯರು ಎಂದು ಪರಿಗಣಿಸದೆ ಪ್ರಾಣಿಗಳಿಗಿಂತ ಕೀಳಾಗಿ, ಕ್ರೂರವಾಗಿ ಶೋಷಿಸುತ್ತಿದ್ದುದು. ಇದು ಎಷ್ಟರ ಮಟ್ಟಿಗೆ ಅಮಾನೀಯವಾಗಿತ್ತೆಂದರೆ ಅಲ್ಲಿನ ನಂಬೂದರಿ ಬ್ರಾಹ್ಮಣರು ಮತ್ತು ಅಸ್ಪೃಶ್ಯರಿಗೂ ನೇರವಾಗಿ ಸಂಪರ್ಕವೇ ಇರಲಿಲ್ಲ. ಅದೇನಿದ್ದರೂ ನಾಯರ್ ಜನಾಂಗದ ಮೂಲಕವೇ ನಡೆಯಬೇಕಿತ್ತು. ನಂಬೂದರಿಗಳು ನಡೆದು ಹೋಗುವಾಗ ನಾಯುರ್ ಜನಾಂಗದವನೊಬ್ಬ ಓ ಎಂದು ಕೂಗಿಕೊಳ್ಳುತ್ತಾ ಮುಂದೆ ಮುಂದೆ ಹೋಗುತ್ತಿದ್ದನು. ಈ ಕೂಗನ್ನು ಕೇಳಿಸಿಕೊಂಡ ಅಸ್ಪೃಶ್ಯರು ಓ ನಮ್ಮ ಪಾಲಿನ ದೇವತೆಗಳು ಬರುತ್ತಿದ್ದಾರೆಂದು ಅರಿತು ದಿಕ್ಕಾಪಾಲಾಗಿ, (ಅವರು ಯಾವ್ಯಾವ ಸ್ಥಿತಿಯಲ್ಲಿದ್ದರೂ ಸಹ) ಓಡಿ ಹೋಗಿ, ಗುಡಿ, ಕಾಡು ಸೇರಿಕೊಳ್ಳುತಿದ್ದರು. ಅಸ್ಪೃಶ್ಯರೆಂದು ಪರಿಗಣಿಸಿದ್ದವರು, ನಿಸರ್ಗ ಸಹಜವಾದ ತಮ್ಮ ಉಗುಳನ್ನೂ ಸಹ ಭೂಮಿಯ ಮೇಲೆ ಉಗಿಯುವಂತಿರಲಿಲ್ಲ. ತಮ್ಮ ಸೊಂಟಕ್ಕೆ ಒಂದು ಕುಂಬವನ್ನು ಕಟ್ಟಿಕೊಂಡು ಅದರಲ್ಲಿ ವಾಸಿಸುವ ಕಡೆ ಮಾತ್ರ ಹಾಕಿಕೊಳ್ಳಬೇಕಾಗಿತ್ತು. ದೇವಾಲಯಗಳು ಇರುವ ಸುಮಾರು ದೂರದಲ್ಲಿಯೇ, ಅಸ್ಪೃಶ್ಯರಾದವರು ಆಕಡೆ ತಿರುಗಾಡದಂತೆ ಕೆಲವು ಸೂಚನಾ ಫಲಕಗಳನ್ನು ತೂಗು ಹಾಕುತ್ತಿದ್ದರಂತೆ. ಅವರ್ಣೀಯರು ಚಿನ್ನ, ಬೆಳ್ಳಿ ಮುತಾಂದ ಆಭರಣಗಳನ್ನು ಧರಿಸುವುದು ಕೂಡ ನಿಷೇಧವಾಗಿತ್ತು. ಇವೆಲ್ಲಕ್ಕಿಂತ ಮುಖ್ಯವಾಗಿ ತುಂಬ ನೋವಿನ ಸಂಗತಿ ಎಂದರೆ, ಇಪ್ಪತ್ತೊಂದನೆ ಶತಮಾನದ ಪ್ರಾರಂಭದಲ್ಲಿಯೂ ಸಹ ಅವರ್ಣೀಯರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಜಾತಿಯ ಗಂಭೀರತೆಯನ್ನು ಎತ್ತಿ ತೋರಿಸುತ್ತಿವೆ.[18]

ಕೆಳವರ್ಗದವರು ಸೊಂಟದ ಮೇಲೆ ಬಟ್ಟೆಗಳನ್ನು ತೊಡಲು ಅವಕಾಶವಿರಲಿಲ್ಲ. ಇನ್ನು ಚಪ್ಪಲಿ, ಛತ್ರಿ ಮತ್ತು ಬೆಲೆ ಬಾಳುವ ವಸ್ತುವನ್ನು ಧರಿಸುವುದಂತೂ ದೂರವೇ. ಕೆಳವರ್ಗದ ಸ್ತ್ರೀಯರು ಕೂಡ ಕುಪ್ಪಸವನ್ನು ತೊಡುವಂತಿರಲಿಲ್ಲ. ತೊಟ್ಟರೆ ಇದು ಮೇಲು ಜಾತಿಯವರಿಗೆ ಅಗೌರವ ತೋರಿದಂತೆ ಎಂಬ ನಂಬಿಕೆ ಇತ್ತು. ನಂಬೂದರಿ ಬ್ರಾಹ್ಮಣರಿಗೆ ಅವರ ಅನುಕೂಲಕ್ಕಾಗಿ ಹತ್ತಿರವಾಗಿದ್ದ ನಾಯರ್ ಜನಾಂಗದವರರೂ ಸಹ ಕೆಳಗಿನವರ ಜೊತೆ ಮೈಲಿಗೆ ಮಾಡುವಂತಿರಲಿಲ್ಲ. ಹಾಗೆ ಮಾಡಿದರೆ ಅವರನ್ನು ಕೊಚ್ಚಿಹಾಕುವಂತಹ ಪದ್ಧತಿ ರೂಡಿಯಲ್ಲಿತ್ತು. ಕೆಳಗಿನವನಿಂದ ಮುಟ್ಟಿಸಿಕೊಂಡ ನಾಯರ್‌ರನ್ನು ನಂಬೂದಾರಿಗಳು ಮುಟ್ಟಿದರೂ ಸಹ ಅವರಿಗೆ ಮೈಲಿಗೆ ಆಗುತ್ತದೆ ಎಂಬ ನಂಬಿಕೆಯೇ ಇದಕ್ಕೆ ಕಾರಣವಾಗಿತ್ತು. ವಿಷಾದ ಸಂಗತಿ ಎಂದರೆ ಕೆಳವರ್ಗದವರು ಮತ್ತು ಅಸ್ಪೃಶ್ಯರಾದವರು ಹೀಗೆ ಬದುಕುವುದೇ ನಮ್ಮ ಧರ್ಮ ಎಂದು ನಂಬಿದ್ದರು. ಆದರೆ ಇದಕ್ಕೆ ಸಂಬಂಧಪಟ್ಟ ಕುತಂತ್ರಗಳನ್ನು ರೂಪಿಸಿದ್ದವರು ಮಾತ್ರ ಕ್ರೂರ ಮನಸ್ಸಿನ ಬ್ರಾಹ್ಮಣ ಶಕ್ತಿಗಳು, ಬಹು ಸಂಖ್ಯಾತರಾದ ಶೂದ್ರರು, ಹಿಂದುಳಿದವರು, ದಲಿತರನ್ನು ತಮ್ಮ ಕುತಂತ್ರದಿಂದ ಹಿಂಡುತ್ತಾ ಬದುಕನ್ನು ನಡೆಸುತ್ತಿದ್ದರು. ಈ ರೀತಿ ಕ್ರೂರ ಪದ್ಧತಿಗಳಿದ್ದ ನಾಡಿನಲ್ಲಿ ಹುಟ್ಟಿ ಬಂದ 'ಶ್ರೀ ನಾರಾಯಣ ಗುರು' ಅವರು ಮಾನವೀಯತೆಯ ಬೀಜಾಂಕುರ ಮಾಡಿ ಸಮಾಜ ಮಾನವೀಯವಾಗಿ ಪರಿವರ್ತನೆಗೊಳ್ಳಲು ತಮ್ಮ ಜೀವನವನ್ನೇ ಮುಡುಪಾಗಿಟ್ಟುಕೊಂಡು ಶ್ರಮಿಸಿದ್ದು ಗಮನಾರ್ಹವಾಗಿದೆ.[19]

ಹಿಂದುಳಿದ ಈಳವ ಜನಾಂಗಕ್ಕೆ ಸೆರಿದ ಶ್ರೀ ನಾರಾಯಣ ಗುರು ಅವರು 1854 ರ ಆಗಸ್ಟ್ 21 ರಂದು ಶ್ರೀಮತಿ ಕುಟ್ಟಿ ಅಮ್ಮ ಅವರ ಮಗನಾಗಿ ಜನಿಸಿದರು. ಬಾಲ್ಯದಲ್ಲಿಯೇ ಗಂಭೀರದಿಂದಿದ್ದ ಇವರನ್ನು,

ಹಿರಿಯರೆಲ್ಲರೂ ಪ್ರಿತಿಯಿಂದ 'ನನ್ನು' ಎಂದು ಕರೆರಯುತ್ತಿದ್ದರು. ವಾಸ್ತವವಾಗಿ ಶ್ರೀ ನಾರಾಯಣ ಗುರು ಅವರ ಕೌಟುಂಬಿಕ ಹಿನ್ನಲೆಯೇ ತುಂಬ ಸುಸಂಸ್ಕೃತವಾದುದಾಗಿತ್ತು. ಇವರ ತಂದೆಯವರು ಒಳ್ಳೆಯ ವಿದ್ವಾಂಸರಾಗಿದ್ದರು. ಮನೆಯಲ್ಲಿ ಪ್ರತಿನಿತ್ಯ ಬೆಳಿಗ್ಗೆ, ಸಂಜೆ ಪೂಜೆ ಪುರಸ್ಕಾರಗಳಂತಹ ಧಾರ್ಮಿಕ ಕಾರ್ಯಗಳು ತಪ್ಪದೆ ನಡೆಯುತ್ತಿದ್ದವು. ಇವರ ತಾಯಿಯವರು ಸಹ ತುಂಬ ಸುಸಂಸ್ಕೃತ ಹಿನ್ನಲೆಯಿಂದ ಬಂದವರಾಗಿದ್ದರು. ಈ ರೀತಿಯ ಕೌಟುಂಬಿಕ ಹಿನ್ನಲೆ, ಬಾಲಕ 'ನನ್ನು'ವಿನ ಮೇಲೆ ಸಾಕಷ್ಟು ಗಾಢವಾದ ಪ್ರಭಾವವನ್ನು ಬೀರಿತು. ಇವರು ಇಷ್ಟು ಸುಸಂಸ್ಕೃತವಾಗಿದ್ದರೂ ಸಹ, ನಂಬೂದರಿ ಬ್ರಾಹ್ಮಣರು ಇವರನ್ನು ಕೀಳಾಗಿ ಕಂಡು ಮಡಿ–ಮೈಲಿಗೆ ಆಚರಿಸುತ್ತಿದ್ದುದು ಸೂಕ್ಷ್ಮ ಮನಸ್ಸಿನ ಬಾಲಕ 'ನನ್ನು'ವಿಗೆ ತುಂಬ ವಿಚಿತ್ರವಾಗಿ ಕಾಣಿಸುತ್ತಿತ್ತು. ಈ ವಿಚಿತ್ರ ಗೆರೆಯನ್ನು ಕಂಡ 'ನನ್ನು' ಒಂದೊಂದು ಸಲ ಮೈಲಿಗೆ ಆಯಿತೆಂದು ಓಡಿಹೋಗುವ ನಂಬೂದರಿ ಬ್ರಾಹ್ಮಣ ಹುಡುಗರನ್ನು ಅಟ್ಟಿಸಿಕೊಂಡು ಹೋಗಿ ಮುಟ್ಟಿ ಅವರು 'ಮೈಲಿಗೆ' ಎಂದು ಪರದಾಡುವುದನ್ನು ಕಂಡು ವಿಚಿತ್ರವಾದ ಸಂತೋಷವನ್ನು ಅನುಭವಿಸುತ್ತಿದ್ದರಂತೆ. ಈ ರೀತಿಯ ಹಲವಾರು ವಿಚಿತ್ರ ಸಂಪ್ರದಾಯಗಳು ಸೂಕ್ಷ್ಮ ಮನಸ್ಸಿನ ಮೇಲೆ ಮಾಡಿದ ಪ್ರಭಾವ ಪರಿಣಾಮಗಳು, ಈ ಬಗ್ಗೆ ವಿಶೇಷವಾದ ಚಿಂತನೆ ನಡೆಸಲು ಕಾರಣವಾದವು. ಈ ಎಲ್ಲಾ ಹಿನ್ನಲೆಯಲ್ಲಿ ಶ್ರೀ ನಾರಾಯಣ ಗುರು ಅವರು ತಮಿಳು, ಮಲೆಯಾಳಂ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಲಭ್ಯವಿದ್ದ ಎಲ್ಲಾ ಶಾಸ್ತ್ರ, ಪುರಾಣ, ಕಾವ್ಯ, ಇತಿಹಾಸ ಮತ್ತು ಧಾರ್ಮಿಕ ಸಂಬಂಧಿ ಗ್ರಂಥಗಳನ್ನೆಲ್ಲಾ ತುಂಬಾ ಆಳವಾಗಿ ಅಧ್ಯಯನ ಮಾಡುತ್ತಾ, ಹೆಚ್ಚಿನ ಜ್ಞಾನರ್ಜನೆಯನ್ನು ಪಡೆದುಕೊಳ್ಳತ್ತಲೇ ಬದುಕಿನ ಶೋಧನೆಗೆ ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೆ.[20]

ಮನುಷ್ಯ ಮೂಲಭೂತವಾಗಿ ಒಂದೆ. ಜಾತಿ, ಮತ, ಧರ್ಮ, ವರ್ಣ, ಅಂತಸ್ತು ಮುಂತಾದ ಕಾರಣಗಳ ನೆಪವೊಡ್ಡಿ ಶೋಷಿಸುತ್ತಿರುವುದು ಅಮಾನವೀಯವಾದದ್ದು ಎಂಬುದನ್ನು ಶ್ರೀ ನಾರಾಯಣ ಗುರು ಅರಿತುಕೊಂಡಿದ್ದರು. ಅದರಲ್ಲೂ ಅರ್ಥವಿಲ್ಲದ ಜಾತಿವ್ಯವಸ್ಥೆಯಿಂದ, ಮಾನವೀಯತೆಯ ಮೇಲಾಗುತ್ತಿರುವ ಕ್ರೂರ ಶೋಷಣೆಯ ಬಗ್ಗೆ ಮನಸಾರೆ ನೊಂದುಕೊಳ್ಳುತ್ತಿದ್ದರು. ದಲಿತರು, ಹಿಂದುಳಿದವರು, ಕೆಳಜಾತಿಯವರು ಯಾವ್ಯಾವ ಕಾರಣಗಳಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬುದನ್ನು ಅವರು ಬಹಳ ಸ್ಪಷ್ಟವಾಗಿ ಅರಿತುಕೊಂಡಿದ್ದರು. ಮುಖ್ಯವಾಗಿ ಅಸ್ಪೃಶ್ಯರಿಗೆ, ಕೆಳಜಾತಿಯವರಿಗೆ ಹಿಂದುಳಿದವರಿಗೆ ನಿಷಿದ್ಧವಾಗಿದ್ದ ದೇವಾಲಯ ಪ್ರವೇಶ ಮತ್ತು ಸಂಸ್ಕೃತ ಕಲಿಕೆಯನ್ನು, ಜ್ಞಾನವನ್ನು ಯಾರೇ ಆದರೂ ಸಹ, ತಮ್ಮ ಸ್ವಇಚ್ಛೆ ಮತ್ತು ಪರಿಶ್ರಮದಿಂದ ಪಡೆಯಲು ಸಾಧ್ಯ ಎಂಬ ವಿವೇಕವನ್ನು ಮೂಡಿಸುವುದರ ಜೊತೆಗೆ ತಾವೇ ಕೆಲವರಿಗೆ ಕಲಿಸಿದರು. ಶ್ರೀ ನಾರಾಯಣ ಗುರು ಅವರು ಸಾಧ್ಯವಾದ ಎಲ್ಲಾ ಕಡೆಗಳಲ್ಲೂ ದೇವಾಲಯಗಳನ್ನು ಕಟ್ಟಿಸಿದರು. ಅಲ್ಲಿ ಯಾವುದೇ ಜಾತಿ, ಮತಧರ್ಮಗಳ ಬೇಧವಿಲ್ಲದೆ, ಎಲ್ಲಾ ಜನಮನಗಳು ಮುಕ್ತವಾಗಿ ನಿರ್ಭೀತಿಯಿಂದ ಪೂಜೆ–ಪುರಸ್ಕಾರಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿದರು. ಅವರ ದಟ್ಟವಾದ ಮಾನವಪ್ರೇಮದ ವಿಚಾರಧಾರೆಗಳಿಂದ ಪ್ರಭಾವಿತರಾಗಿ, ಜಾತಿ, ಮತ, ಧರ್ಮ ಮುತಾಂದ ಬೇಧಗಳನ್ನು ಕಳಚಿ ಎಲ್ಲಾ ವರ್ಗದಿಂದ ಅವರ ಅನುಯಾಯಿಗಳು, ಅಭಿಮಾನಿಗಳು ಹುಟ್ಟಿಕೊಂಡರು.[21] ಹಾಗಾಗಿ ವಿಚಾರಮಾಡುವ ಶಕ್ತಿಗಳು ಅಲ್ಲಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹುಟ್ಟಿಕೊಂಡವು. ಹಾಗೆಯೇ ಸ್ವಾತಂತ್ರ್ಯ ನಂತರದ ಭಾರತದ ಬಹುತೇಕ ರಾಜ್ಯಗಳ ರಾಜಕಾರಣ ಕ್ರಾಂಗ್ರೆಸ್‌ನ

ಹಿಡಿತದಲ್ಲಿದ್ದರೆ,[22] ಕೇರಳದಲ್ಲಿ 1952 ರಲ್ಲಿಯೇ ಎಡಪಂಥೀಯ ರಾಜಕೀಯ ಪಕ್ಷಗಳು ಆಳ್ವಿಕೆ ನಡೆಸಿದವು. ಇ.ಎಂ.ಎಸ್ ನಂಬೂದರಿಪಾದ್ ಅವರ ನೇತೃತ್ವದಲ್ಲಿ ಸರ್ಕಾರ ಶೋಷಿತರ, ದುರ್ಬಲರ, ಅವಮಾನಿತರ ಸುಧಾರಣೆಗಾಗಿ ಹಲವಾರು ರಚನಾತ್ಮಕ ಕೆಲಸಗಳನ್ನು ಯಶಸ್ವಿಯಾಗಿ ಮಾಡಿತು. ಇದಕ್ಕೆ ಪ್ರಮುಖ ಕಾರಣ ಎಂದರೆ, ಇ.ಎಂ.ಎಸ್ ನಂಬೂದರಿಪಾದ್ ಸಂಪುಟದಲ್ಲಿದ್ದ ಬಹುಪಾಲು ರಾಜಕಾರಣಿಗಳೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಶ್ರೀ ನಾರಾಯಣ ಗುರು ಅವರ ವಿಚಾರಗಳಿಂದ ಪ್ರಭಾವಿತರಾಗಿದ್ದವರು.[23]

**ಡಾ. ರಾಮಮನೋಹರ ಲೋಹಿಯಾ**

ಡಾ. ರಾಮ ಮನೋಹರ ಲೋಹಿಯಾ ಅವರನ್ನು ಕುರಿತು ಬರೆಯುವಾಗ ಹೆಮ್ಮೆ ಎನಿಸುತ್ತದೆ. ಕಬ್ಬಿಣದಂತೆ ಕಟುವಾಗಿ ಕಾಣುವ ಅವರ ಹೃದಯ ಮಲ್ಲಿಗೆಯಷ್ಟು ಮೃದು.[24] ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ಅಕ್ಬರ್‌ಪುರದಲ್ಲಿ 1910 ಆಗಸ್ಟ್ 23ರಂದು ಜನಿಸಿದರು. ತಂದೆ ಹಿರಾಲಾಲ್, ತಾಯಿ ಚಂದ್ರಿ. ಉಪ್ಪಿನ ಸತ್ಯಾಗ್ರಹ ಕುರಿತು ಅವರು ರಚಿಸಿದ ಪ್ರೌಢ ಪ್ರಬಂಧಕ್ಕೆ ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯ ಪಿಎಚ್.ಡಿ ಪದವಿ ನೀಡಿ ಗೌರವಿಸಿತು. ಜರ್ಮನಿಯ ಮಾರ್ಕ್ಸ್ ಮತ್ತು ಹೆಗೆಲ್‌ರಿಗಿಂತ ಭಿನ್ನ ದೃಷ್ಟಿಯ ಇತಿಹಾಸದ ಅಧ್ಯಯನದಿಂದ ಪರಿಪಕ್ವಗೊಂಡ ಲೋಹಿಯಾ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ವಹಿಸಿದ ಪಾತ್ರ ಮಹತ್ತರವಾದುದು. ಅನ್ಯಾಯ ಸಹಿಸಲಾರದೇ, ನೆಹರೂ ಅಂತವರೂ ನಡುಗುವಂತೆ ಗುಡುಗಿದವರು.[25]

'ಮ್ಯಾನ್ ಕೈಂಡ್' ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ಮಾಸಿಕ ಪತ್ರಿಕೆ, ಅದು ಇಂದಿಗೂ ವಿಶ್ವ ಪತ್ರಿಕಾ ರಂಗದ ಗೈಡ್ ಇದ್ದ ಹಾಗೆ. ಅವರ ಕೃತಿಗಳು ಭಾರತಕಷ್ಟೇ ಅಲ್ಲ, ಮನುಕುಲದ ಮುನ್ನಡೆಗೆ ಮಾರ್ಗದರ್ಶಿಗಳಾಗಿವೆ. ನಿಶ್ಯಸ್ತ್ರೀಕರಣ ಹಾಗೂ ವಿಶ್ವಮಾನವತ್ವ ಅವರ ಗುರಿಯಾಗಿತ್ತು. ಮಾನವ ಇತಿಹಾಸಕ್ಕೆ ಹೊಸ ವ್ಯಾಖ್ಯಾನ ನೀಡಿದ ಡಾ. ಲೋಹಿಯಾ ಅವಿವಾಹಿತರಾಗಿ 12-10-1967 ರಂದು ಇಲ್ಲವಾದರು. ಅವರದು ಸಹಜ ಸಾವಲ್ಲ, ಶಸ್ತ್ರಕ್ರಿಯೆ ಮಾಡಿದ ವೈದ್ಯರ ನಿರ್ಲಕ್ಷ್ಯ ಹಾಗೂ ಕಾಣದ ಕೈವಾಡ ಇರುವುದು ಈ ದೇಶದ ದೊಡ್ಡ ದುರಂತಗಳಲ್ಲಿ ಒಂದು.[26] ಅನ್ಯಾಯದ ವಿರುದ್ಧ ಸದಾ ಸುಡುತ್ತಿದ್ದ ಲೋಹಿಯಾ ವಿಶ್ವಮಾನವತೆಯಲ್ಲಿ ಅಗಲವರಿಯದ ಅನಂತ ಆಕಾಶವಾಗಿದ್ದರು.[27] ನೆಹರು ಸ್ತ್ರೀ ಸಮಾನತೆಯ ಕಾಯಿದೆಯನ್ನು ಲೋಕಸಭೆಯಲ್ಲಿ ಮಂಡಿಸಿದಾಗ 'ಹಳ್ಳಿಯಲ್ಲಿ ವಾಸಿಸುತ್ತಿರುವ ಕೋಟ್ಯಂತರ ಭಾರತೀಯ ಸ್ತ್ರೀಯರ ಸಮಾನತೆಯ ಅಗತ್ಯ ಬರಿಯ ಕಾಯಿದೆಯಲ್ಲ, ಬದಲಿಗೆ ಕುಡಿಯುವ ನೀರು, ಮಲಮೂತ್ರ ವಿಸರ್ಜನೆಗೆ ವ್ಯವಸ್ಥೆ' ಎಂದು ಕಡ್ಡಿ ತುಂಡಾದಂತೆ ಖಂಡಿಸಿದರು.[28]

ದೇಶದ ಸಾಮಾನ್ಯ ಪ್ರಜೆಯೊಬ್ಬ ದಿನವೊಂದಕ್ಕೆ 8 ಆಣೆಯಿಂದ 5 ರೂಪಾಯಿಯಲ್ಲಿ ಬದುಕುತ್ತಿದ್ದರೆ ಅದೇ ದೇಶದ ಪ್ರಧಾನಿ ನೆಹರೂ ದಿನವೊಂದಕ್ಕೆ 25 ರಿಂದ 30 ಸಾವಿರದವರೆಗೆ ಖರ್ಚು ಮಾಡುವುದು ಅನ್ಯಾಯದ ಪರಮಾವಧಿ ಎಂದು ಲೋಕಸಭೆಯಲ್ಲಿ ನೆಹರೂ ವಿರುದ್ಧ ಅವರ ಸಮ್ಮುಖದಲ್ಲೇ ಸಿಡಿದು ನಿಂತರು. ಅವರನ್ನು ಸಕ್ರಿಯವಾಗಿ ತೊಡಗಿಸುವುದರ ಮೂಲಕ ಕೇವಲ ಒಂದು ಲಕ್ಷ ರೂಪಾಯಿಗಳ ಸದಸ್ಯರ ಚಂದಾ ಹಣದಲ್ಲಿ ಪ್ರಬಲ ಕಾಂಗ್ರೆಸ್‌ಗೆ ಪ್ರತಿಯಾಗಿ ಇಡೀ ಭಾರತದ ಸಮಾಜವಾದಿ ರಾಜಕೀಯ ಪ್ರತಿಪಕ್ಷ ಕಟ್ಟಿದವರು. ಗಣರಾಜ್ಯ ಭಾರತದ ಅಧ್ಯಕ್ಷರಾಗಿದ್ದ ಡಾ.ಬಾಬುರಾಜೇಂದ್ರ ಪ್ರಸಾದ್ ಕಾಶಿ ಕ್ಷೇತ್ರದಲ್ಲಿ

ಸಾರ್ವಜನಿಕವಾಗಿ 201 ಜನ ಬ್ರಾಹ್ಮಣರ ಪಾದ ಪೂಜೆ ಮಾಡುತ್ತಿದ್ದಾಗ ಬ್ರಾಹ್ಮಣನ ಕಾಲು ತೊಳೆಯುವ ಅಧ್ಯಕ್ಷರ ನಾಡಿನಲ್ಲಿ ಪುರೋಹಿತ, ಚಮ್ಮಾರ, ಅಗಸ, ಶಿಕ್ಷಕ ಇವರ ಮಧ್ಯೆ ಮುಕ್ತ ಸಂವಾದದ ಸಾಧ್ಯತೆ ಕಡಿದು ಹೋಗುತ್ತದೆ ಎಂದು ಈ ಜಾತಿಯ ಗುಲಾಮಗಿರಿಯ ವಿರುದ್ಧ ಅಟಂಬಾಂಬಿನಂತೆ ಸಿಡಿದರು.[29]

ಒಂದು ದೇಶಕ್ಕೆ ಒಂದೇ ಸಿವಿಲ್ ಕೋಡ್ (ಸಮಾನ ನಾಗರಿಕ ಕಾಯ್ದೆ) ಇರಬೇಕೆಂದು ಹೇಳಿಕೆ ಕೊಟ್ಟಾಗ ಈ ಹೇಳಿಕೆಯನ್ನು ಹಿಂತೆಗೆದುಕೊಳ್ಳದಿದ್ದರೆ ಓಟು ಕೊಡುವುದಿಲ್ಲ ಎಂದ ಮುಸ್ಲಿಮರಿಗೆ ತಮ್ಮ ನಿಲುವನ್ನು ಮನವರಿಕೆ ಮಾಡಿಕೊಟ್ಟು ಸಮಾನ ನಾಗರಿಕ ಕಾಯ್ದೆಯನ್ನು ಸಮರ್ಥಿಸಿಕೊಂಡು ಗೆದ್ದು ಆಯ್ಕೆಯಾದರು.

ನೆಹರು ಸತ್ತ ದಿನ ಅಮೇರಿಕಾದ ಜಾನ್‌ಸನ್‌ನ ಒಂದು ಹೋಟೆಲ್‌ನಲ್ಲಿ ಕರಿಯನ್ನು ಒಳಗೆ ಬಿಡುವುದಿಲ್ಲ ಎಂದ ಕ್ಷಣಾರ್ಧದಲ್ಲಿ ಬಣ್ಣ ಮತ್ತು ಅಸಮಾನತೆಯ ವಿರುದ್ಧ ನಿಂತಲ್ಲೇ ಸಿಡಿದು ದಸ್ತಗಿರಿಯಾಗಿ ಅವರ ತಪ್ಪನ್ನು ಅವರಿಗೆ ಅರಿವು ಮಾಡಿ ಕ್ಷಮಾಪಣೆ ಕೇಳುವಂತೆ ಮಾಡಿದರು. ನಿಮ್ಮ ಮಾನವ ಅಣ್ವಸ್ತ್ರಕ್ಕೆ ಬದಲಾಗಿ ಮಾನವ ಕಲ್ಯಾಣದ ಸಂಶೋಧನೆಯ ಸಿದ್ದಿ ಏನಾದರೂ ಆಗಿದೆಯೆ ಎಂದು ಆಲ್ಬರ್ಟ್ ಐನ್‌ಸ್ಟಿನ್‌ರನ್ನು ಆಲಂಗಿಸಿಕೊಂಡವರು. ಹೀಗೆ ಡಾ. ಲೋಹಿಯಾ ಅವರ ವಿಶ್ವಮಾನವ ಹೃದಯದ ತುಡಿತ ಮಿಡಿತಗಳು ಬಹಳಷ್ಟು.[30]

ಸ್ವಾತಂತ್ರ್ಯ ಪೂರ್ವದಲ್ಲಿ ಅವರಿಗೆ ಬ್ರೀಟಿಷರು ಕೊಟ್ಟ ಹಿಂಸಾಚಾರವನ್ನು ಕುರಿತು ಹೀಗೆ ಬರೆಯುತ್ತಾರೆ "ಒಂದಲ್ಲ ಒಂದು ವಿಧದಲ್ಲಿ ನಾಲ್ಕು ತಿಂಗಳ ಕಾಲ ನನಗೆ ಚಿತ್ರ ಹಿಂಸೆ ಕೊಡಲಾಯಿತ್ತೆಂದು ಇಲ್ಲಿ ಹೇಳಬಯಸುತ್ತೇನೆ. ದಿನದಿಂದ ದಿನಕ್ಕೆ ರಾತ್ರಿಯಿಂದ ರಾತ್ರಿಗೆ ನನ್ನನ್ನು ಸ್ವಲ್ಪವೂ ಮಲಗಲು ಬಿಡದಂತೆ ನೋಡಿಕೊಳ್ಳುತ್ತಿದ್ದರು. ಈ ರೀತಿ ಹತ್ತು ದಿನಗಳವರೆಗೆ ಸಂಪೂರ್ಣ ಎಚ್ಚರವಾಗಿದ್ದೆ. ಬಳಸಿದ ನನ್ನನ್ನು ನಿಲ್ಲಿಸಲು ಪ್ರಯತ್ನಿಸುತ್ತಿದ್ದ ಪೋಲಿಸರಿಗೆ ತಲೆಯೊಡ್ಡುವಾಗ ಕೋಳ ಹಾಕಿದ ಕೈಗಳ ಸಮೇತ ಒರಟು ನೆಲದ ಮೇಲೆ ವರ್ತುಲಾಕಾರವಾಗಿ ದರದರ ಎಳೆದರು.[31]

ಸ್ವಾತಂತ್ರ್ಯ ನಂತರವಾದರೂ ಲೋಹಿಯಾ ನೆಮ್ಮದಿಯಾಗಿ ಬದುಕಿದರೆ? ಎಂದರೆ ಅದಕ್ಕೂ ಅವರಾಶವಿರಲಿಲ್ಲ. ಬ್ರೀಟಿಷರಿಗಿಂತ ಕ್ರೂರವಾಗಿ ಅವರನ್ನು ಸ್ವತಂತ್ರ ಭಾರತದ ನಡೆಸಿಕೊಂಡಿತು. ಬಡವರ, ನೊಂದವರ, ದಲಿತರ, ತುಳಿತಕ್ಕೆ ಒಳಗಾದವರ, ಅನಾಥರ ಹೃದಯದಲ್ಲಿದ್ದೇನೆ ಎನ್ನುವುದನ್ನು ಬಿಟ್ಟು, ವಿಶ್ವದಗಲಕ್ಕೆ ಬೆಳೆದವರಾಗಿಯೂ ಮನೆ ಇಲ್ಲದೆ, ಕಾರಿಲ್ಲದೆ, ಬ್ಯಾಂಕಿನಲ್ಲಿ ಪೈಸೆ ಹಣವಿಲ್ಲದೆ, ಹೆಂಡತಿ ಮಕ್ಕಳಿಲ್ಲದೆ, ಪ್ರಾಪಂಚಿಕವಾದ ಕೋರಿಕೆಗಳಾವವೂ ಇಲ್ಲದೆ ಮುಂದಿನ ಪೀಳಿಗೆಗೆ ಎಂದೆಂದಿಗೂ ಒರಿಜಿನಲ್ ಆಗೇ ಉಳಿಯುವ ವ್ಯಕ್ತಿತ್ವ ಒಂದನ್ನೇ ಬಿಟ್ಟು ತೆರಳಿದವರೆಂದರೆ ಡಾ. ಲೋಹಿಯಾ ಒಬ್ಬರೆ.[32]

ಹೀಗಾಗಿ ಇಂದಿನ ಯುವ ಜನತೆ ಡಾ. ಲೋಹಿಯಾ ಅವರನ್ನು ಪರಿಚಯಿಸಿಕೊಳ್ಳದೆ ಹೋದರೆ ಅವರ ಬದುಕು ವ್ಯರ್ಥ. ಅಷ್ಟೇ ಅಲ್ಲ ಅವರನ್ನು ಮರೆತರೆ ವಿಶ್ವ ಅರ್ಥ ಕಳೆದುಕೊಳ್ಳುತ್ತದೆ. ವಿಶ್ವದ ಮನೆ ಮನೆಯ ಮನಗಳಿಗೆ ಲೋಹಿಯಾ ಅವರ ಚಿಂತನೆ ಇಂದಿನ ತೀವ್ರ ಅಗತ್ಯ. ಜೊತೆಗೆ ಲೋಹಿಯಾ ಆಚೆಗೆ ಚಿಂತಿಸಬಲ್ಲ ಸತ್ಶೀಲ ಸ್ವತಂತ್ರ ಮನಸ್ಸುಗಳು ಹೆಚ್ಚು ಹೆಚ್ಚು ಹುಟ್ಟಿಕೊಂಡಾಗ ಯಾವುದೇ ಶೋಷಣೆಯನ್ನು ಬುಡಸಮೇತ ಕಿತ್ತೊಗೆಯಲು ಸಾಧ್ಯ ಎಂಬುದನ್ನು ಅಲ್ಲಗಳೆಯುವಂತಿಲ್ಲ.[33]

**ಕೊನೆಟಿಪ್ಪಣಿಗಳು:**


1. ಭಗವತ್ ಶರಣ ಉಪಾಧ್ಯಾಯ. (1997). ವರ್ಣವ್ಯವಸ್ಥೆ ಒಂದು ವಿಶ್ಲೇಷಣೆ. *ಸಂಬುದ್ಧ.* ಮಾರ್ಚ್ ಸಂಚಿಕೆ. ಪುಟ.12
2. ದತ್ ಎನ್.ಕೆ. (ವರ್ಷ). ಆರಿಜನ್ ಅಂಡ್ ಗ್ರೌತ್ ಆಫ್ ಕ್ಯಾಸ್ಟ್ ಇನ್ ಇಂಡಿಯಾ. ಕಲ್ಪಜ ಪಬ್ಲಿಕೇಷನ್. ಪುಟ. 51
3. ಅದೇ. ಪುಟ. 55.
4. ಭಗವತ್ ಶರಣ ಉಪಾಧ್ಯಾಯ. (1997). *ಪೂರ್ವೋಕ್ತ.* ಪುಟ.13
5. ಭಟ್,ಸಿ.ಆರ್. *ಶ್ರೀಮಂತ ರಾಷ್ಟ್ರದಲ್ಲಿ ಬಡ ಭಾರತೀಯರು.* ಪುಟ 2.
6. ಹಾಪ್‌ಕಿನ್ಸ್. (1981). ಮ್ಯೂಚುಯಲ್ ರಿಲೇಷನ್ ಆಫ್ ಫೋರ್ ಕ್ಯಾಸ್ಟ್ಸ್. ತಕ್ಷಶಿಲ ಹಾರ್ಡ್‌ಬೌಂಡ್ಸ್. ಪುಟ.19
7. ಭಗವತ್ ಶರಣ ಉಪಾಧ್ಯಾಯ. (1997). *ಪೂರ್ವೋಕ್ತ.* ಪುಟ.14
8. ತೆಲಗಾವಿ ಲಕ್ಷ್ಮಣ. (1988). *ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಪುಟ.21
9. ಗೋಪಿನಾಥ ಎಂ. (1999). ಬಹುಜನರಿಗೆ ತಮ್ಮದೇ ಆದ ಸರ್ಕಾರ ಏಕೆ ಬೇಕು?. ಸೃಷ್ಠಿ ಪ್ರಕಾಶನ. ಪುಟ 2.
10. ಆಲಗೂರು.ಎಸ್.ಎಸ್. (2005). *ವಿಚಾರ ದೀಪಿಕೆ.* ದೀಕ್ಷ ಪ್ರಕಾಶನ. ಪುಟ 18.
11. ಜವರೇಗೌಡ.ದೇ. (2003). *ಕ್ರಾಂತಿಕಾರಿ ಅಂಬೇಡ್ಕರ್.* ತನ್ಮಯ ಪ್ರಕಾಶನ. ಪುಟ 5.
12. ಗೋಪಿನಾಥ.ಎಂ. (1999). *ಪೂರ್ವೋಕ್ತ.* ಪುಟ 3.
13. ಜವರೇಗೌಡ.ದೇ. (2003). *ಪೂರ್ವೋಕ್ತ.* ಪುಟ 6.
14. ಕಟ್ಟಿಮನಿ ತೇಜಸ್ವಿ. (2004). ಕತ್ತಲೆಯ ಅಳಿವಿನಾಚೆ. ಸ್ಪೂರ್ತಿ ಪ್ರಕಾಶನ. ಪುಟ 97
15. ಜಗತಾಪ ಮುರಳಿಧರ. (2007). ಸಮಾಜ ಸುಧಾರಕ ಮಹಾತ್ಮ ಪುಲೆ. ಮನಸು ಪ್ರಕಾಶನ. ಪುಟ 1–2
16. ಕಾಟ್ಕರ ಸರಜೂ. (2006). *ಕನ್ನಡ–ಮರಾಠಿ ದಲಿತ ಸಾಹಿತ್ಯ.* ಶರಣ ಪ್ರಕಾಶನ. ಪುಟ. 21
17. *ಅಂಬೇಡ್ಕರ್‌ರ ಬರಹಗಳು ಭಾಷಣಗಳು. ಸಂಪುಟ–1.* (2015). ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ. ಪುಟ 31
18. *ಅಂಬೇಡ್ಕರ್‌ರ ಬರಹಗಳು–ಭಾಷಣಗಳು. ಸಂಪುಟ–2* (2015). ಪುಟ 700–707.
19. ಕಟ್ಟಿಮನಿ ತೇಜಸ್ವಿ (2004). *ಪೂರ್ವೋಕ್ತ.* ಪುಟ. 103.
20. ಸಮತಾ ದೇಶಮಾನೆ. (2008). *ಸಮಾಜ ಪರಿವರ್ತನೆಯ ಚಿಂತಕರು.* ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ. ಪುಟ. 79.
21. ಕಟ್ಟಿಮನಿ ತೇಜಸ್ವಿ. (2004). *ಪೂರ್ವೋಕ್ತ.* ಪುಟ 103.

22.ಅದೇ. ಪುಟ. 103.

23.ಸಮತಾ ದೇಶಮಾನೆ (2008). *ಪೂರ್ವೋಕ್ತ.* ಪುಟ 78

24.ತೆಲಗಾವಿ ಲಕ್ಷ್ಮಣ. (1998). *ಪೂರ್ವೋಕ್ತ.* ಪುಟ 19

25.ಕಟ್ಟಿಮನಿ ತೇಜಸ್ವಿ. (2004). *ಪೂರ್ವೋಕ್ತ.* ಪುಟ 105

26.ಸೀತಾರಾಮ ಯೆಚೂರಿ ಮಾಡಿದ ಭಾಷಣ (ಮೇ 31,) ಸಿ.ಪಿ.ಐ.ಪತ್ರಿಕೆ,

27.ಕಟ್ಟಿಮನಿ ತೇಜಸ್ವಿ. (2004). *ಪೂರ್ವೋಕ್ತ.* ಪುಟ 106

28.ಲಕ್ಷ್ಮೀನಾರಾಯಣ ರಾವ್.ಕೆ. (1998). ಕಾ. ಇ.ಎಂ.ಎಸ್: ಒಂದು ನೆನಪು. ಬಹುಮತ– ಮಾಸಪತ್ರಿಕೆ. 1 (4) ಪುಟ. 4.

29.ರಾಬರ್ಟ್ ಎಲ್ ಹಾರ್ಡ್‌ಗ್ರೇವ್. (1965). ಡ್ರಾವಿಡಿಯನ್ ಮೂವ್‌ಮೆಂಟ್. ಬಾಂಬೆ ಪಾಪುಲರ್ ಪಬ್ಲಿಕೇಷನ್. ಪುಟ. 16

30.ತೆಲಗಾವಿ ಲಕ್ಷ್ಮಣ. (1998). *ಪೂರ್ವೋಕ್ತ.* ಪುಟ. 24.

31. ದೇಶಮಾನೆ ಸಮತಾ. (2008). *ಪೂರ್ವೋಕ್ತ.* ಪುಟ. 90

32.ಲಕ್ಷ್ಮೀನಾರಾಯಣ ರಾವ್.ಕೆ. (1998). *ಪೂರ್ವೋಕ್ತ.* ಪುಟ. 5.

33.ಹಾಲಪ್ಪ ಎಚ್. (2005). *ಬಹುದನಿ.* ಜ್ಞಾನ ಪ್ರಕಾಶನ. ಪುಟ 1.